

ಯಾವುದೋ ಗುಂಗಿನಲ್ಲಿ ಕಳೆದು ಹೋಗಿದ್ದ ಶಾರಿಯ ಬಲಗೈ ತುಂಬಾ ಫಾತಿಮಾ ನವಿಲುಗರಿಯ ಮದರಂಗಿಯಿಟ್ಟು, ಎಡಗೈಗೆ ಹಕ್ಕಿ ದಂಡಿನ ದಿಬ್ಬಣ ಹೊರಟಂತೆ ಕಾಣುವ ಚಿತ್ರ ಬಿಡಿಸುತ್ತಿದ್ದಳು.

ಬಾಳೆಕುಳಿಯಲ್ಲಿ ಯಾರದ್ದೇ ಮದುವೆಯಿರಲಿ ಫಾತಿಮಾಳಿಗೆ ಕರೆ ಬರುವುದು ನಿಕ್ಕಿ. ಫಾತಿಮಾ ಹಚ್ಚಿದ ಮದರಂಗಿ ಅಷ್ಟು ರಂಗೇರುತ್ತಿತ್ತು! ಮದುವೆಯಲ್ಲಿ ಹಚ್ಚಿದ ಮದರಂಗಿ ಒಳ್ಳೆ ರಂಗೇರಿದರೆ ಗಂಡ ಹೆಂಡತಿಯನ್ನು ಬಹಳ ಪ್ರೀತಿಸುತ್ತಾನಂತೆ ಅಂತ ನಂಬಿದ ಹೆಣ್ಣು ಮಕ್ಕಳಿಗೆ ಬರಗಾಲ ಬರುವವರೆಗೂ ಫಾತಿಮಾಳಿಗೆ ಗಿರಾಕಿಗಳ



ಎಸ್.ವಿ. ಹೂಗಾರ